<u>ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ</u>

ಸಿ. ಸಿ. ನಂಃ **518/2019**

ಪಿ.ಡಬ್ಲೂ- **9**
ಸಿ.ಡಬ್ಲೂ- **15**

| | |
|---|---|
| ಹೆಸರು | ಃ- ರಂಗನಾಥ ನೀಲಮ್ಮನ್ನವರ |
| ತಂದೆ / ಗಂಡನ ಹೆಸರು | ಃ- ಗಾಂಧಿ |
| ವಯಾ | ಃ- 45 ವರ್ಷ |
| ಉದ್ಯೋಗ | ಃ- ವೃತ್ತ ನಿರೀಕ್ಷಕರು |
| ವಾಸಸ್ಥಳ | ಃ- ಮುಂಡಗೋಡ |
| ಸತ್ಯ ಪ್ರತಿಜ್ಞೆ ಮೇರೆಗೆ | ಃ- ದಿನಾಂಕಃ 19-01-2026 |

*<u>ಮುಖ್ಯ ವಿಚಾರಣೆ ಃ- ಸ. ಸ. ಅಭಿಯೋಜಕರಿಂದ ಃ</u>*

ನಾನು ದಿನಾಂಕ 08-01-2019 ರಿಂದ 07-03-2020 ರವರೆಗೆ ನವಲಗುದದ ವೃತ್ತಾ ನಿರೀಕ್ಷಕರಾಗಿ ಕಾರ್ಯ ನಿರ್ವಹಿಸಿರುತ್ತೇನೆ.

1) ದಿನಾಂಕಃ 10-04-2019 ರಂದು ಕಡತವನ್ನು ಚಾಸಾ-14 ರವರಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ಮೃತನ ಶವ ಪಂಚನಾಮೆಯನ್ನು ಹುಬ್ಬಳ್ಳಿಯ ಕೀಮ್ಸ ಆಸ್ಪತ್ರೆಯಲ್ಲಿ ಚಾಸಾ-4 ಮತ್ತು ಚಾಸಾ-5 ರವರ ಸಮಕ್ಷಮದಲ್ಲಿ ಬೆಳಗ್ಗೆ 10-30 ರಿಂದ 11-30 ಗಂಟೆ ಸಮಯದಲ್ಲಿ ಮಾಡಿ, ಚಾಯಾಚಿತ್ರವನ್ನು ತೆಗೆದಿರುತ್ತೇನೆ. ಸದರಿ ಪಂಚನಾಮೆಯನ್ನು ನಿ.ಪಿ.**19** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.19(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಚಾಯಾಚಿತ್ರ ತೆಗೆದಿರುತ್ತೇನೆ. ಸದರಿ ಚಾಯಾಚಿತ್ರಗಳನ್ನು ಕ್ರಮವಾಗಿ ನಿ.ಪಿ.**20** ರಿಂದ ನಿ.ಪಿ.**22** ಎಂದು ಗುರುತಿಸಲಾಯಿತು. ನಂತರ ದೇಹವನ್ನು ಮಂಜವ್ವರವರಿಗೆ ಓಪ್ಪಿಸಿ ಹಿಂಬರಹ ಪಡೆದುಕೊಂಡಿರುತ್ತೇನೆ. ಸದರಿ ಹಿಂಬರಹವನ್ನು ನಿ.ಪಿ.**23** ಎಂದು ಗುರುತಿಸಲಾಯಿತು.

2) ಆನಂತರ ಅದೇ ದಿನ ಸಾಕ್ಷಿದಾರರಾದ ಚಾಸಾ-6 ಮತ್ತು ಚಾಸಾ-7 ರವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಹೇಳಿಕೆಗಳು ಈಗಾಗಲೇ ನಿಪಿ-7 ಮತ್ತು ನಿಪಿ-9 ಎಂದು ಗುರುತಿಸಲಾಗಿರುತ್ತದೆ. ಅದೇ ದಿನ ಚಾಸಾ-8 ರಿಂದ ಚಾಸಾ-11 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಚಾಸಾ-8 ಮತ್ತು ಚಾಸಾ-9 ರವರ ಹೇಳಿಕೆಯನ್ನು ನಿ**.**ಪಿ**.24** ಮತ್ತು ನಿಪಿ**-25** ಎಂದು ಗುರುತಿಸಲಾಯಿತು. ಚಾಸಾ-10 ಮತ್ತು ಚಾಸಾ-11 ರವರ ಹೇಳಿಕೆಯು ಈಗಾಗಲೇ ನಿಪಿ-10 ಮತ್ತು ನಿಪಿ-17 ಎಂದು ಗುರುತಿಸಲಾಗಿರುತ್ತದೆ.

3) ಅದೇ ದಿನ ಪ್ರಕರಣದಲ್ಲಿ ವಶಪಡಿಸಿಕೊಂಡ ಕೆ ಎಸ ಆರ್ ಟಿ ಸಿ ಬಸ್ಸ ಸಂಖ್ಯೆ ಕೆಎ 23 ಎಪ 0764 ನೇದ್ದರನ್ನು ಚಾಸಾ-11 ರವರಿಂದ ನಿಪಿ-11 ರಂತೆ ಇಂಡಿಮೆನಿಟಿ ಬಾಂಡ ಪಡೆದು ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಸದರಿಯವರಿಂದ ಆರೋಪಿತನ ಕರ್ತವ್ಯದ ಸಂಬಂದ ಹಾಗೂ ವಾಹನ ಸಂಬಂದ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. ಅವುಗಳು ಈಗಾಗಲೇ ನಿಪಿ-12 ರಿಂದ ನಿಪಿ-16 ಎಂದು ಗುರುತಿಸಲಾಗಿರುತ್ತದೆ.

4) ಆನಂತರ ಅದೇ ದಿನ ನ್ಯಾಯಲಯದ ಎದುರು ಇದ್ದ ಆರೋಪಿತನು ಠಾಣೆಗೆ ಹಾಜರಾಗಿದ್ದು ಆತನನ್ನು ಕಾನೂನು ಪ್ರಕಾರ ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಟ್ಟಿರುತ್ತೇನೆ. ದಿನಾಂಕ 14-05-2019 ರಂದು ಚಾಸಾ-12 ರವರಿಂದ ನಿಪಿ-18 ರಂತೆ ಯಾಂತ್ರಿಕ ಪರೀಕ್ಷಾ ವರದಿಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿ.ಪಿ.18(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಮೃತಳ ಮರಣೋತ್ತಾರಾ ಪರೀಕ್ಷಾ ವರದಿಯನ್ನು ಚಾಸಾ-13 ರವರಿಂದ ಪಡೆದುಕೊಂಡಿರುತ್ತೇನೆ. ಸದರಿ ವರದಿಯನ್ನು ನಿ**.**ಪಿ**.26** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.26(ಎ) ಎಂದು ಗುರುತಿಸಲಾಯಿತು.

5) ದಿನಾಂಕ 15-05-2019 ರಂದು ಆರೋಪಿತನ ವಿರುದ್ಧ ಸಾಕಷ್ಟು ಸಾಕ್ಷ್ಯದಾರ ಲಬ್ಯವಿದ್ದು ಆತನ ವಿರುದ್ಧ ಅಂತಿಮ ವರದಿಯನ್ನು ತಯಾರಿಸಿ ದೋಷರೋಪಣ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಸದರಿ ದೋಷರೋಪಣ ಪಟ್ಟಿಯನ್ನು ನಿ**.**ಪಿ**.27** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.27(ಎ) ಎಂದು

ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿದ್ದ ಆರೋಪಿತನನ್ನು ನೋಡಿ ಗುರುತು ಮಾಡುತ್ತಾರೆ.

ಪಾಟೀಸವಾಲು ಃ ಶ್ರೀ ಎಸ ಎ ಪಿ ವಕೀಲರಿಂದ ಃ -

1) ನಾನು ಸಾಕ್ಷಿದಾರರ ಹೇಳಿಕೆ ಹಾಗೂ ಮರುಹೇಳಿಕೆ ಪಡೆದುಕೊಂಡ ಬಗ್ಗೆ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಪಂಚನಾಮೆ ಪಂಚರಿಗೆ ಲಿಖಿತ ನೋಟಿಸ ನೀಡಿಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಅಲ್ಲಿ ಯಾವುದೇ ತನಿಖೆ ನಡೆಸಿಲ್ಲ ಅಂದರೆ ಸರಿಯಲ್ಲ. ಘಟನಾ ಸ್ಥಳದ ಉತ್ತರ ದಿಕ್ಕಿಗೆ ನವಲಗುಂದ ರಸ್ತೆ ಇರುತ್ತದೆ ಎಂದರೆ ಸಾಕ್ಷಿಯು ನಾನು ಪಂಚನಾಮೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಘಟನಾ ಸ್ಥಳವು ಜನಸಂದನಿಯ ಪ್ರದೇಶ ಎಂದರೆ ಸರಿ. ಘಟನಾ ಸ್ಥಳದಲ್ಲಿ ಸಾಮಾನ್ಯವಾಗಿ ವೇಗದಿಂದ ವಾಹನ ಚಲಾಯಿಸಲು ಬರುವುದಿಲ್ಲ ಎಂದರೆ ಸರಿ. ಬಸ್ಸನ್ನು ಹಿಂದೆ ತೆಗೆದುಕೊಳ್ಳುವ ಸಮಯದಲ್ಲಿ ಯಾವುದೇ ಸೆನ್ಸರಗಳು ಅಳವಡಿಸಿರುವುದಿಲ್ಲ. ಬಸ್ಸಿಗೆ ಯಾವುದೇ ತಾಂತ್ರಿಕ ಸೌಲಭ್ಯವಿಲ್ಲದ ಕಾರಣ ಆರೋಪಿತನ ತಪ್ಪು ಇರುವುದಿಲ್ಲ ಅಂದರೆ ಸರಿಯಲ್ಲ.

2) ಚಾಸಾ-1 ಮತ್ತು ಮೃತನ ಕುಟುಂಬಕ್ಕೆ ವಿಮೆಯ ಸಹಾಯವಾಗಲು ನಮ್ಮ ಮನೋಸೋಇಚ್ಛೆ ಚಾಸಾ-14 ರವರು ಪ್ರಥಮ ಮಾಹಿತಿಯನ್ನು ಠಾಣೆಯಲ್ಲಿಯೆ ಸೃಷ್ಟಿ ಮಾಡಿ, ನಿಜ ಸಂಗತಿಗಳನ್ನು ಮುಚ್ಚಿಟ್ಟು, ಸುಳ್ಳು ಮಾಹಿತಿಯ ಮೇರೆಗೆ ಪ್ರ.ವ.ವ. ದಾಖಲಿಸಿದ್ದು, ನಾನು ಸದರಿ ಸುಳ್ಳು ದೂರಿನ ಮೇರೆಗೆ ನಮೂದು ಮಾಡಲಾದ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಆರೋಪಿತನ ತಪ್ಪು ಇರುವುದಿಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ. ಇದೆ.

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**